ನೆರಳು-ಬೆಳಕು

# ನಾಳೆಯಿಂದ ಫಿಲ್ಮ್ ಹಾರ್ವೆಸ್ಟ್ 2012

ಉದ್ಯಮಿ ವಿಜಯ್ ಮಲ್ಯರ ದಿ ಕಲೆಕ್ಷನ್ ಯುಬಿ ಸಿಟಿ ಸಬ್‌ಲೈಮ್ ಸಹಯೋಗದಲ್ಲಿ ಮೊಟ್ಟ ಮೊದಲ ಬಾರಿಗೆ ಸ್ಪರ್ಧಾರಹಿತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ 'ಫಿಲ್ಮ್ ಹಾರ್ವೆಸ್ಟ್ 2012' ಅನ್ನು ಮಾರ್ಚ್ 16ರಿಂದ 20ರವರೆಗೆ ಆಯೋಜಿಸಿದೆ.

ಬೆಂಗಳೂರಿನ ಯುಬಿ ಸಿಟಿಯಲ್ಲಿ ನಡೆಯಲಿರುವ ಈ ಚಲನಚಿತ್ರೋತ್ಸವ ಉಜ್ಮಾ ಇರ್ಫಾನ್ ಅವರ ಕಲ್ಪನೆಯ ಕೂಸಾಗಿದ್ದು ಇದರಲ್ಲಿ ಕಿರುಚಿತ್ರ, ಸಾಕ್ಷ್ಯಚಿತ್ರ ಮತ್ತು ಪರಿಪೂರ್ಣ ಸಿನಿಮಾಗಳನ್ನು ಪ್ರದರ್ಶಿಸಲಾಗುತ್ತದೆಯಂತೆ. ಚಿತ್ರೋತ್ಸವದಲ್ಲಿ 'ಸಾಮಾಜಿಕ ಜವಾಬ್ದಾರಿ' ವಿಷಯಗಳ ಆಧಾರದ ಮೇಲೆ ಸಿನಿಮಾಗಳನ್ನು ಆಯ್ಕೆ ಮಾಡಲಾಗಿದ್ದು, ಅಂತಾರಾಷ್ಟ್ರೀಯ ವೇದಿಕೆಯನ್ನು ಪ್ರಪಂಚದಾದ್ಯಂತ ಸಿನಿಮಾ ನಿರ್ಮಾಪಕರಿಗೆ ಒದಗಿಸಿಕೊಡುವುದು ಈ ಚಲನಚಿತ್ರೋತ್ಸವದ ಮುಖ್ಯ ಉದ್ದೇಶ.

ಕಾಸ್ಮೊಪಾಲಿಟನ್ ನಗರವಾಗಿರುವ ಬೆಂಗಳೂರಿನಲ್ಲಿ ವಿಶ್ವದೆಲ್ಲೆಡೆ ಸಂಚರಿಸುವ ಲಕ್ಷಾಂತರ ಜನರಿದ್ದಾರೆ. ಈ ಕಾರಣದಿಂದಾಗಿ ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸಿನಿಮಾ ಹಬ್ಬವನ್ನು ಆಯೋಜಿಸಲಾಗಿದ್ದು, ಇಲ್ಲಿನ ಸಿನಿಮಾ ಪ್ರಿಯರಿಗೆ ವಿಶ್ವದೆಲ್ಲೆಡೆ ಸಿನಿಮಾ ನೋಡಲು ಒಂದು ಉತ್ತಮ ಅವಕಾಶ ಎನ್ನಬಹುದು.





ಈ ಕಾರ್ಯಕ್ರಮದ ಚಿತ್ರೋತ್ಸವ ನಿರ್ದೇಶಕರಾಗಿ ಪ್ರಸಿದ್ಧ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಕಾರ್ಯನಿರ್ವಹಿಸಲಿದ್ದು, ಸಂಗೀತ ನಿರ್ದೇಶಕ ರಿಕಿ ಕೇಜ್ ಅವರು ಸಹ ಜವಾಬ್ದಾರಿಯುತ ಕಾರ್ಯನಿರ್ವಹಿಸಲಿದ್ದಾರೆ. ಈ ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುವ ಸಿನಿಮಾಗಳು ಸಾಮಾಜಿಕ ಜವಾಬ್ದಾರಿಯ ಕುರಿತಾಗಿ ಜನರಲ್ಲಿ ಅರಿವು ಮೂಡಿಸುವಂತಿರಬೇಕೆಂಬ ದೃಷ್ಟಿ ಇರಿಸಿಕೊಂಡು ಗಿರೀಶ್ ಕಾಸರವಳ್ಳಿ ಮತ್ತಿತರರು ಅಂತಾರಾಷ್ಟ್ರೀಯ ಮಟ್ಟದ ಸಿನಿಮಾ ನಿರ್ಮಾಪಕರಿಂದ ಬಂದ ಅನೇಕ ಸಿನಿಮಾಗಳಲ್ಲಿ ವಿವಿಧ ಭಾಷೆಗಳ 11 ಸಿನಿಮಾಗಳನ್ನು ಈ ಹಬ್ಬಕ್ಕಾಗಿ ಆಯ್ಕೆ ಮಾಡಿದ್ದಾರೆ. ಇವುಗಳಲ್ಲಿ 9 ಅಂತಾರಾಷ್ಟ್ರೀಯ ಮತ್ತು 3 ರಾಷ್ಟ್ರೀಯ ಸಿನಿಮಾಗಳು ಪ್ರದರ್ಶನಗೊಳ್ಳಲಿವೆಯಂತೆ.

ಸಂಗೀತ ನಿರ್ದೇಶಕ ರಿಕಿ ಕೇಜ್ ಅವರ ರಸಸಂಜೆ ಮೂಲಕ ಈ ಚಿತ್ರೋತ್ಸವ ಪ್ರಾರಂಭವಾಗಲಿದ್ದು, ವಿಶ್ವದೆಲ್ಲೆಡೆಯಿಂದ 35 ಸಂಗೀತಗಾರರು ಮತ್ತು 6 ಗಾಯಕರು ಭಾಗವಹಿಸಲಿದ್ದಾರೆ. ಒಂದು ತಾಸು ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸುಮಾರು 20 ಆಯ್ದ ಸಿನಿಮಾಗಳ ಸಂಗೀತವನ್ನು ನುಡಿಸಲಾಗುವುದು.